ನೀವು ಹೊಂಬಳ್ಳಿ ಸ್ಕೀಮ್‌ನಲ್ಲಿ ಅನ್ಯಾಯವಾಗಿದೆ ಲಕ್ಷಾಂತರ ರೂಪಾಯಿ ದುರ್ವ್ಯವಹಾರವಾಗಿದೆ ಎಂದು ಹೇಳಿದಾಗ ನೀವು ತನಿಖೆ ಮಾಡಿಸುತ್ತೇನೆಂದು ಹೇಳಿದಿರಿ ತನಿಖೆ ಮಾಡಿಸಿದಿರೋ ಬಿಟ್ಟರೋ ನಮಗಂತೂ ಏನೂ ಗೊತ್ತಾಗಲಿಲ್ಲ. ಆದರೆ ಆ ಸ್ಕೀಮ್ ನಿಂತು ಹೋಯಿತು, ಇದರಿಂದ ಜನಗಳಿಗೆ ಪ್ರಯೋಜನವಾಗಲಿಲ್ಲ. ಈ ರೀತಿ ಆಗುವುದು ಬೇಡ ಆದ್ದರಿಂದ ತಾವು ಇವತ್ತು ತಾವು ಒಂದು ತಿಂಗಳೊಳಗಾಗಿ ತನಿಖೆ ಮಾಡಿಸಿ ಕೊಡುತ್ತೇನೆಂಬ ಮಾತನ್ನಾದರೂ ಹೇಳಿ.

ಶ್ರೀ ಡಿ.ಟಿ. ಜಯಕುಮಾರ್ : ಮೇಲ್ನೋಟಕ್ಕೆ ಆದೇನಾದರೂ ಪ್ರೂವ್ ಆದರೆ ಖಂಡಿತವಾಗಿ ಇದನ್ನು ತನಿಖೆ ಮಾಡಿಸುತ್ತೇವೆ, ಖಂಡಿತ ದುರುಪಯೋಗವಾಗಿದ್ದು ಕಂಡು ಬಂದರೆ ಇದನ್ನು ಪರಿಶೀಲಿಸುತ್ತೇವೆ.

ತಿಪಟೂರು ತಾಲ್ಲೂಕಿಗೆ ಬಸ್ ಡಿಪೋ ಮಂಜೂರಾತಿ.

289 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತಿಪಟೂರು ನಗರಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಡಿಪೋ ಈ ಹಿಂದೆ ಮಂಜೂರಾಗಿದ್ದುದು ನಿಜವಲ್ಲವೇ? ಸದರಿ ಬಸ್ ಡಿಪೋ ಪ್ರಾರಂಭಗೊಳ್ಳದಿರಲು ಕಾರಣಗಳೇನು?*

ಆ) *ಕರ್ನಾಟಕ ರಾಜ್ಯದಲ್ಲಿ ಕೊಬ್ಬರಿ ಹಾಗೂ ತೆಂಗಿನ ಕಾಯಿ ಮಾರುಕಟ್ಟೆಗೆ ಪ್ರಸಿದ್ಧವಾಗಿರುವ ತಿಪಟೂರು ನಗರದಲ್ಲಿ ಒಂದು ಬಸ್ ಡಿಪೋ ಪ್ರಾರಂಭಿಸಲು ಈಗಲಾದರೂ ಸರ್ಕಾರವು ಯಾವ ಕ್ರಮ ಕೈಗೊಳ್ಳುವುದೇ?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) :

ಅ) ತಿಪಟೂರಿನಲ್ಲಿ ಬಸ್ ಘಟಕವನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಆದರೆ ಸದರಿ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತಿಪಟೂರಿನಲ್ಲಿ ಜಮೀನು ಹೊಂದಿರುವುದಿಲ್ಲ.

ಆ) ಸದರಿ ಉದ್ದೇಶಕ್ಕಾಗಿ ಸರ್ವೆ ಸಂಖ್ಯೆ. 1ರಲ್ಲಿ 12 ಎಕರೆ ಜಮೀನನ್ನು ಸಣ್ಣ ನೀರಾವರಿ ಇಲಾಖೆಯಿಂದ ಪಡೆಯಲು ಕ್ರಮ ಕೈಗೊಳ್ಳಲಾಗಿದ್ದು, ಜಮೀನನ್ನು ಪಡೆದ ನಂತರ ಸಂಪನ್ಮೂಲವನ್ನು ಅವಲಂಬಿಸಿ ಬಸ್ ಘಟಕ ನಿರ್ಮಾಣ ಕೈಗೊಳ್ಳಲಾಗುವುದು.

ಶ್ರೀ ಬಿ.ನಂಜಾಮರಿ : ಮಾನ್ಯ ಅಧ್ಯಕ್ಷರೆ, ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ, ನಾವು ತಿಪಟೂರು ನಗರಕ್ಕೆ ಒಂದು ಬಸ್ ಡಿಪೋ ಮಂಜೂರಾಗಿದ್ದು, ಇದುವರೆವಿಗೂ ಏಕೆ ಮಂಜೂರಾಗಿಲ್ಲ ಎಂದು ಕೇಳಿದ್ದೇವೆ, ಅದಕ್ಕೆ ಅವರು ತಿಪಟೂರು ಬಸ್‌ಸ್ಟಾಪ್ ಸ್ಥಾಪಿಸಲು ಜಮೀನು ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ತಿಪಟೂರು ಬಸ್ ನಿಲ್ದಾಣದ ಜಾಗದಲ್ಲಿ ಒಂದು ಸಣ್ಣ ಕೆರೆ ಇದೆ, ಆ ಕೆರೆಯಲ್ಲಿ ಸಾಕಷ್ಟು ಜಮೀನೂ ಇದೆ, ಇದನ್ನು ಅವರೇ ತೆಗೆದುಕೊಳ್ಳಬಹುದು, ನನ್ನ ಎರಡನೇ ಪ್ರಶ್ನೆಗೆ 12 ಎಕರೆ ಜಮೀನನ್ನು ನೀರಾವರಿ ಇಲಾಖೆಯಿಂದ ಪಡೆದ ನಂತರ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು : ಈಗ ನಿಮಗೆ ಬಸ್ ಡಿಪೋ ಬೇಕು ಅಲ್ಲವೇ?

ಶ್ರೀ ಬಿ. ನಂಜಾಮರಿ : ಹೌದು ಸಾರ್.

ಅಧ್ಯಕ್ಷರು : ನನ್ನ ಕ್ಷೇತ್ರದಲ್ಲೂ ಇದೇ ಸಮಸ್ಯೆ ಉಂಟಾಗಿದೆ, ನೀವು ಸ್ಥಳೀಯವಾಗಿ ಕುಳಿತುಕೊಂಡು ಅಧಿಕಾರಿಗಳ ಜೊತೆಗೆ ಮಾತನಾಡಿ, ಜಾಗ ಎಲ್ಲಿದೆ ಎಂದು ಅವರಿಗೆ ಕೊಡಿ ತಕ್ಷಣ ಪ್ರಾರಂಭ ಮಾಡುವುದಕ್ಕೆ ಅವರು ಮುಂದೆ ಬರುತ್ತಾರೆ.

ಶ್ರೀ ಬಿ. ನಂಜಾಮರಿ : ಸುಮಾರು ಸಾರಿ ನಾವು ಸಚಿವರು ಅಧಿಕಾರಿಗಳ ಮೀಟಿಂಗ್‌ಗೆ ಹೋಗಿದ್ದೆವು ಹೇಳಿದ್ದೆವು ಆದರೆ ಇದುವರೆವಿಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ.

ಅಧ್ಯಕ್ಷರು : ಒಂದು ಕೆಲಸ ಮಾಡಿ ಜಾಗ ರೆಡಿ ಇದೆ ಎಂದು ನನಗೆ ತಿಳಿಸಿ, ನಾನು ಮಂಜೂರು ಮಾಡಿಸಿ ಕೊಡುತ್ತೇನೆ.

ಶ್ರೀ ಬಿ. ನಂಜಾಮರಿ : ಜಾಗ ರೆಡಿ ಇದೆ. ಅಧ್ಯಕ್ಷರೇ ಈಗ ಬಸ್ ನಿಲ್ದಾಣ ಆ ಕೆರೆಯೊಳಗೆ ನಡೆಯುತ್ತದೆ. ಕೆರೆಯಲ್ಲಿ ಸಾಕಷ್ಟು ಎಕರೆ ಜಮೀನು ದೊರಕುತ್ತದೆ, ಸಣ್ಣ ನೀರಾವರಿ ಇಲಾಖೆಯಿಂದ ವರ್ಗಾವಣೆ ಮಾಡಿಸಿಕೊಂಡರೆ ಏನೂ ತೊಂದರೆ ಆಗುವುದಿಲ್ಲ, ಒಂದು ತಿಂಗಳು ಆಗಬಹುದು ಅಥವಾ ಎರಡು ತಿಂಗಳು ಆಗಬಹುದು, ವರ್ಗಾವಣೆಯಾದ ತಕ್ಷಣ ಯಾವಾಗ ಡಿಪೋ ಪ್ರಾರಂಭವಾಗುತ್ತದೆ ಎನ್ನುವುದೆ ನನ್ನ ಪ್ರಶ್ನೆ. ನಮಗೆ ಇಲ್ಲಿ ತೊಂದರೆ ಏನಾಗಿದೆ ಎಂದರೆ ಅರಸೀಕೆರೆ ಮತ್ತು ಚೆನ್ನರಾಯಪಟ್ಟಣ ಡಿಪೋದಿಂದ ರೂಟ್ ಬಸ್ಸುಗಳು ಇದ್ದವು.

ಅಧ್ಯಕ್ಷರು : ನೋಡಿ ನಂಜಾಮರಿ ಯವರೇ ನೀವು ಹೊಸ ಶಾಸಕರು, ನಿಮಗೆ ಒಳ್ಳೆಯದಾಗಲಿ ಎಂದು ನಾನು ಹೇಳುತ್ತಿದ್ದೇನೆ. ನಿಮ್ಮಕ್ಷೇತ್ರದಲ್ಲಿ ನೀವು ಶಾಸಕರಾಗಿರುವ ಅವಧಿಯಲ್ಲಿ ಬಸ್ ಡಿಪೋ ಆಗಬೇಕು ಎನ್ನುವ ಆತುರ ನಿಮಗೆ ಇದ್ದರೆ ನೀವೇ ಕಛೇರಿಗಳಿಗೆ ಓಡಾಡಬೇಕು. ಅದನ್ನು ಸಣ್ಣ ನೀರಾವರಿ ಇಲಾಖೆಯಿಂದ ರಿಲೀಸ್ ಮಾಡಿಸಿ ಕಂದಾಯಕ್ಕೆ ಹ್ಯಾಂಡ್ ಓವರ್ ಮಾಡಿಸಬೇಕು, ಕಂದಾಯದಿಂದ ಅವರು ಕೆಎಸ್‌ಆರ್‌ಟಿಸಿಗೆ ಹ್ಯಾಂಡ್ ಓವರ್ ಮಾಡಬೇಕು ನಮ್ಮಲ್ಲಿ ಕೂಡ ಇದೇ ಸಮಸ್ಯೆ ಇತ್ತು. ನಾನೂ ಕೂಡ ಈಗ ಸಣ್ಣ ನೀರಾವರಿ ಇಲಾಖೆಯಿಂದ ರಿಲೀಸ್ ಮಾಡಿಸಿ ಕಂದಾಯ ಇಲಾಖೆಯಿಂದ ಕೊಡಿಸಿದೆ. ಆಮೇಲೆ ಅವರು ಟೆಂಡರ್ ಕರೆಯೋದು ಅದು ಸುಮಾರು ಸಮಯ ತೆಗೆದುಕೊಳ್ಳುತ್ತದೆ, ನೀವು ಬೆನ್ನ ಹಿಂದೆ ಬಿದ್ದು ಆ ಕೆಲಸ ಮಾಡಿಸಬೇಕು.

11.30 ಪಿ.ಎಂ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ತಿಪಟೂರು ರಾಷ್ಟ್ರೀಕರಣವಾಗಿರತಕ್ಕ ಪ್ರದೇಶ ಅಲ್ಲ. ಅದು ಖಾಸಗಿ ಬಸ್ಸುಗಳು ಮತ್ತು ಸಾರಿಗೆ ಸಂಸ್ಥೆಯ ಬಸ್ಸುಗಳು ಓಡಾಡತಕ್ಕ ಒಂದು ತಾಲ್ಲೂಕು. ತಿಪಟೂರಿನಲ್ಲಿ ಒಂದು ದಿನಕ್ಕೆ ಸುಮಾರು 323 ನಿಲ್ಲತಕ್ಕ ಬಸ್ಸುಗಳು ಇವೆ. ಅದು ರಾಷ್ಟ್ರೀಕರಣ ಪ್ರದೇಶ ಆಗದೇ ಇರುವುದರಿಂದ, ಅದನ್ನು ಆದ್ಯತಾ ಪಟ್ಟಿಯಲ್ಲಿ ನಾವು ಸೇರಿಸಿ ಕೊಂಡಿಲ್ಲ. ಒಟ್ಟಿನಲ್ಲಿ ಅಲ್ಲಿ

ಒಂದು ಒಳ್ಳೆಯ ಬಸ್ ನಿಲ್ದಾಣ ಇದೆ. ಈ ಸಂದರ್ಭದಲ್ಲಿ ಎಲ್ಲಾ ಮಾನ್ಯ ಶಾಸಕರ ಗಮನಕ್ಕೆ ತರತಕ್ಕಂಥಾದ್ದು, ತಾವೇನು ಅಧ್ಯಕ್ಷರಾಗಿ ತಮ್ಮ ಕ್ಷೇತ್ರದಲ್ಲಿ ಬಸ್ ಡಿಪೋ ಮಾಡಿಸುವುದಕ್ಕೆ ಎಷ್ಟೊಂದು ಪ್ರಯತ್ನ ಮಾಡಿದ್ದೀರಿ, ಅದನ್ನು ಎಲ್ಲರೂ ಸಹಿತ ಮಾಡಿದರೆ ಈ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ತಮ್ಮ ವಿಚಾರವನ್ನು ನಾನು ಸ್ವಾಗತ ಮಾಡುತ್ತೇನೆ ಮತ್ತು ಅಭಿನಂದಿಸುತ್ತೇನೆ. ಶ್ರೀನಿವಾಸಪುರದ ಬಸ್ ಘಟಕವನ್ನು ಪ್ರಾರಂಭ ಮಾಡುವುದಕ್ಕೆ ತಾವು ಮಾಡಿರತಕ್ಕ ಕೆಲಸ ಬಹಳ ದೊಡ್ಡದು. ಆದರೆ, ಒಂದು ತೊಂದರೆ ಏನೆಂದರೆ, ಬಸ್ ನಿಲ್ದಾಣ ಮತ್ತು ಬಸ್ ಡಿಪೋಗಳನ್ನು ಕಟ್ಟಲಿಕ್ಕೆ ನಮಗೆ ಅಲ್ಲಿರತಕ್ಕ ಕೆರೆಗಳನ್ನೇ ತೋರಿಸುತ್ತಾರೆ. ಆ ಕೆರೆಗಳಲ್ಲಿ ಡಿಪೋ ಮಾಡಿದರೆ, ಮಳೆ ಬಂದಾಗ ಮುಳುಗಿ ಹೋಗುತ್ತವೆ. ಹೀಗೆ ಅನೇಕ ಬಸ್ ನಿಲ್ದಾಣಗಳಲ್ಲಿ ಆಗುತ್ತಿದೆ. ಆದರೂ ಕೂಡ ಮೊನ್ನೆಯದಿನ ಬಂದು ನನ್ನ ಜೊತೆಯಲ್ಲಿ ಬಹಳ-ಚರ್ಚೆಯನ್ನು ಮಾಡಿದ್ದಾರೆ. ಬಹಳ ತೊಂದರೆ ಇದೆ, ನೀರು ನಿಂತುಕೊಳ್ಳುತ್ತದೆ. ನಾವೇನು ಮಾಡುವುದು ಎಂದರು. ಸರ್ವೆ ನಂ.1ರಲ್ಲಿ ಒಂದು ಜಮೀನು ಇದೆ. ಅದು ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟಿರತಕ್ಕ ಜಮೀನು. ನಾನು ಮಾನ್ಯ ಮುಖ್ಯ ಮಂತ್ರಿಗಳಿಗೂ ಸಹಿತ ವಿನಂತಿ ಮಾಡಿಕೊಳ್ಳುತ್ತೇನೆ. ಆದಷ್ಟು ಬೇಗ ಆ ಜಮೀನು ತೆಗೆದುಕೊಂಡ ಮೇಲೆ, ಸಾರಿಗೆ ಸಂಸ್ಥೆಯ ಹಣಕಾಸಿನ ಪರಿಸ್ಥಿತಿ ಆಧಾರದ ಮೇಲೆ, ಅದನ್ನು ಕಟ್ಟಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ನಂಜಾಮರಿ : ರಾಷ್ಟ್ರೀಕರಣ ಆಗಿಲ್ಲವೆಂದು ಹೇಳುತ್ತಾರೆ. ಹಿಂದೆ 1992ರಲ್ಲಿ ಬಸ್ ಡಿಪೋ ಮಂಜೂರಾಗಿತ್ತು. ಮಂಜೂರಾಗಿದ್ದನ್ನು ಬೇರೆ ತಾಲ್ಲೂಕಿಗೆ ವರ್ಗಾವಣೆ ಮಾಡಿಕೊಟ್ಟರು. ಆದ್ದರಿಂದ, ಈಗ ಮಂಜೂರಾಗಿಲ್ಲವೆಂದು ಹೇಳುತ್ತಾರೆ, ಇದು ಹೇಗಾಗುತ್ತದೆ?

ಅಧ್ಯಕ್ಷರು : ಪೇಪರಿನಲ್ಲಿ ಮಂಜೂರ್ಮಾಡುವುದಕ್ಕೇನು, ಅವರು ಈಗಲೂ ಮಂಜೂರ್ಮಾಡುತ್ತಾರೆ. ಕಲ್ಲು ಹಾಕುವುದಕ್ಕೆ, ಮಂಜೂರ್ಮಾಡುವುದಕ್ಕೆ ಈಗಲೂ ಮಾಡುತ್ತಾರೆ. ಆದರೆ ಕೆಲಸ ಆಗಬೇಕಲ್ಲ. ನಮ್ಮಲ್ಲೂ ಮಂಜೂರ್ಮಾಡಿ, ಒಂದು ಕಲ್ಲು ನೆಟ್ಟು ಹೋಗಿದ್ದರು ಅದು ಹಾಗೆಯೇ ಇತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದುವರೆಗೂ ಅದು ಮಂಜೂರಾತಿಯಾಗಿಲ್ಲ. ಮಂಜೂರಾತಿಯಾಗತಕ್ಕ ಭರವಸೆ ಇದೆ ಮತ್ತು ಪರಿಶೀಲನೆಯಲ್ಲಿ ಇದೆ. ಆ ಸಂಬಂಧದಲ್ಲಿ ಕೆಲಸ ನಡೆಯುತ್ತಾ ಇದೆ.

ಅಧ್ಯಕ್ಷರು :- ನಾನು ಏನು ಹೇಳಿದೆ ಎಂದರೆ, ಕೆಲವು ಸನ್ನಿವೇಶಗಳಲ್ಲಿ ಏನಾಗುತ್ತದೆಂದರೆ, ಅದು ಮಂಜೂರಾಗಿದೆ, ಇದು ಮಂಜೂರಾಗಿದೆ ಎಂದು ಒಂದು ಕಲ್ಲುನೆಟ್ಟು ಹೋಗುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಆ ರೀತಿ ಭರವಸೆಗಳನ್ನು ಕೊಡುವುದೂ ಇಲ್ಲ ಮತ್ತು ಆ ರೀತಿಯ ಆಜ್ಞೆಗಳನ್ನೂ ಮಾಡುವುದಿಲ್ಲ.

ಅಧ್ಯಕ್ಷರು : ನಾನು ಅವರಿಗೆ ಗೈಡ್ ಮಾಡುವುದಕ್ಕೆ ಪ್ರಯತ್ನಪಟ್ಟೆ. ಅವರು, ಆ ಕೆಲಸ ಮಾಡಿಸಲು ಕುತೂಹಲಗಳಾಗಿದ್ದಾರೆ, ಅವರ ಕ್ಷೇತ್ರದಲ್ಲಿ ಕೆಲಸ ಆಗಬೇಕೆಂದು ಕೇಳುತ್ತಿದ್ದಾರೆ. ನೀವು ಆಮೇಲೆ ನನ್ನ ಕಛೇರಿಗೆ ಬನ್ನಿ, ನಾನು ನಿಮಗೆ ಗೈಡ್ ಮಾಡುತ್ತೇನೆ.

ಶ್ರೀ ಬಿ. ನಂಜಾಮರಿ : ಅಲ್ಲಿರತಕ್ಕ ಕೆರೆಗೆ ಯಾವುದೇ ನೀರಿನ ಸೋರ್ಸ್ ಇಲ್ಲ. ಆ ಕೆರೆ ಮುಳುಗಿ ಹೋಗುತ್ತದೆಂದು ಹೇಳುತ್ತಾರೆ. ನಾವು ಆ ಜಮೀನು ಕೊಡಿಸಿದ ತಕ್ಷಣ, ಬಸ್ ಡಿಪೋ ಮಾಡಿಸಿಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಜಮೀನು ಕೊಡತಕ್ಕ ವ್ಯವಸ್ಥೆ ನಾವು ಮಾಡುತ್ತೇವೆ ನೀವು, ಜಮೀನು ಕೊಟ್ಟತಕ್ಷಣ ಕೆಲಸ ಪ್ರಾರಂಭ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಖಾಸಗಿಯವರಿಂದ ತೆಗೆದುಕೊಳ್ಳುವಂಥಾದ್ದು ಇದ್ದರೆ, ಅದು ಬೇರೆ ವಿಚಾರ. ನಾನು ಹೇಳುವಂಥಾದ್ದು ಏನೆಂದರೆ ಅದು ಸಣ್ಣ ನೀರಾವರಿ ಇಲಾಖೆಯ ಜಮೀನು. ಅದನ್ನು ಸಾರಿಗೆ ಸಂಸ್ಥೆಗೆ ವರ್ಗಾವಣೆ ಮಾಡಿಕೊಳ್ಳುವುದಕ್ಕೆ ನಾನು ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡಿ ಕೊಳ್ಳುತ್ತೇನೆ. ಸರ್ಕಾರ ಎಂದರೆ, ನಾನು ಬೇರೆ, ಅವರು ಬೇರೆ ಅಲ್ಲ, ನಾವೆಲ್ಲಾ ಒಂದೇ. ಈ ವಿಷಯ ಸಚಿವ ಸಂಪುಟಕ್ಕೆ ಬರಬೇಕಾಗುತ್ತದೆ. ಆದ್ದರಿಂದ ಇದನ್ನು ವಿಚಾರ ಮಾಡುತ್ತೇನೆ. ರಾಷ್ಟ್ರೀಕರಣವಾಗಿರತಕ್ಕ ಜಿಲ್ಲೆಗಳಿಗೆ ನಾವು ಮೊದಲ ಆದ್ಯತೆ ಕೊಡಬೇಕಾಗುತ್ತದೆ. ಎರಡನೇ ಆದ್ಯತೆಯನ್ನು ಶಿವಮೊಗ್ಗ, ತುಮಕೂರು, ಕೋಲಾರ-ಇಂತಹ ಜಿಲ್ಲೆಗಳಿಗೆ ಕೊಡಬೇಕಾಗುತ್ತದೆ. ಆದ್ದರಿಂದ ನಾನು ಹೇಳಿದ್ದೇನೆ, ಇದನ್ನು ಪರಿಶೀಲನೆ ಮಾಡುತ್ತೇನೆ.

ಲಾಲ್ ಬಾಗ್‌ಗೆ ಪ್ರವೇಶ ಶುಲ್ಕ.

288 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಾಲ್‌ಬಾಗ್ ಉದ್ಯಾನವನದ ಒಟ್ಟು ವಿಸ್ತೀರ್ಣವೆಷ್ಟು?

ಆ) ಈ ಉದ್ಯಾನವನದಲ್ಲಿ ಇರತಕ್ಕ ಗಿಡಮರಗಳ ಸಂಖ್ಯೆ ಎಷ್ಟು?

ಇ) 1997-98ನೇ ಸಾಲಿನಲ್ಲಿ ಸದರಿ ಉದ್ಯಾನವನದ ಅಭಿವೃದ್ಧಿಗಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಈ) ಸದರಿ ಉದ್ಯಾನವನದಲ್ಲಿ ತೋಟಗಾರಿಕೆ ಕಛೇರಿ ಇರುವುದು ನಿಜವಲ್ಲವೇ?

ಉ) ಸದರಿ ಕಛೇರಿಗಳನ್ನು ಬೇರೆ ಜಾಗಕ್ಕೆ ವರ್ಗಾಯಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಊ) ಸದರಿ ಉದ್ಯಾನವನಕ್ಕೆ ಪ್ರವೇಶ ಶುಲ್ಕ ವಿಧಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಋ) ಉದ್ಯಾನವನಕ್ಕೆ ಬರತಕ್ಕ ಪ್ರವಾಸಿಗರಿಗೆ ಸೂಕ್ತ ರಕ್ಷಣೆ ಒದಗಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?